ವರದಿಯನ್ನೊಪ್ಪಿಸಂವುದಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ೧೯೮೩–೮೪ನೇ ಸಾಲಿನಿಂದ ೧೯೮೪–೮೫ನೇ ಸಾಲಿನವರೆಗೆ ಧನ ವಿನಿಯೋಗ ಲೆಕ್ಕಗಳಂ ಮತ್ತು ವಿತ್ತೀಯ ಲೆಕ್ಕಪತ್ರಗಳ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ (ಸಿವಿಲ್ ಮತ್ತು ರೆವಿನ್ಯೂ) ವರದಿಯ ಬಗ್ಗೆ ಸಮಿತಿಯ ೩೮ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನೊಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸಂವುದಂ

ಶ್ರೀ ಆರ್. ವೆಂಕಟರಾವಂಯ್ಯ.—ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯ ಅಡಿಯಲ್ಲಿ ಬರುವ ಕರ್ನಾಟಕ ರಾಜ್ಯ ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಗೆ ಸಂಬಂಧಿಸಿದ ಕಾರ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಕಲು ತಯಾರಕ (ಕಾಪಿಯಿಸ್ಟ್)ರನ್ನು ಖಾಯಂಗೊಳಿಸುವ ಕುರಿತು ಅಥವಾ ಕಾಪಿಯಿಂಗ್ ಫೀಯನ್ನು ಪುನರ್ವಿಮರ್ಶಿಸಿ ವೇತನ ಕೊಡುವುದರ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನೊಪ್ಪಿಸಲಾಯಿತು.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಎಸ್. ಜಿ. ನಂಜಯ್ಯನವರ್ ಅವರ ಪರವಾಗಿ ಧಾರವಾಡ ಜಿಲ್ಲೆಯಲ್ಲಿ ಮಲಪ್ರಭ ಬಲದಂಡೆಯ ನಾಲೆಗಂ ಮೇಲಿರುವ ಹಿರೇ ಹಳ್ಳಕ್ಕೆ ಆಕ್ವಿಡಿಕ್ಟ್ ಕಟ್ಟಿ ನೀರಾವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಶ್ರೀಮತಿ ಸುಮಾ ವಸಂತ್‌ರವರ ಪರವಾಗಿ ಕೊಡಗು ಜಿಲ್ಲೆಯ ಕುಟ್ಟ ಗ್ರಾಮದ ಆಸುಪಾಸಿನಲ್ಲಿ ಕಾಡಾನೆಗಳ ಹಾವಳಿಯ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಡಿ. ದೇವೇಗೌಡರ ಮೇಲಿನ ಆಪಾದನೆಗಳ ವಿಚಾರದಲ್ಲಿ ಲೋಕಾಯುಕ್ತದ ವರದಿ ಬಹಿರಂಗವಾಗಿರುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ವೀರಪ್ಪ ಮೊಯಲಿ ಮಂತ್ರಿತ್ವದ ಸದಸ್ಯರು ಒಂದು ಅಡ್ವರ್ಟೈಸ್‌ಮೆಂಟ್ ಮೋಷನ್‌ನನ್ನು ಕೊಟ್ಟಿದ್ದರು. ಲೋಕಾಯುಕ್ತಕ್ಕೆ ಶ್ರೀಮಾನ್ ಹೆಚ್ ಡಿ. ದೇವೇಗೌಡರ ವಿರುದ್ಧ ಅಲಿಗೇಷನ್ ಮಾಡಿ ಅವರ ಮೇಲೆ ಲೋಕಾಯುಕ್ತಕ್ಕೆ ಮಾನ್ಯ ಮುಖ್ಯಮಂತ್ರಿಗಳು ರೆಫರ್ ಮಾಡಿದಾಗ ಆ ರಿಪೋರ್ಟ್ ಕೂಡ ಈಗಾಗಲೇ ಲೋಕಾಯುಕ್ತರು ಗವರ್ನರ್‌ಗೆ ಸಬ್‌ಮಿಟ್ ಮಾಡಿದ್ದಾರೆ ಎನ್ನುವ ವರದಿ ಪೇಪರ್‌ನಲ್ಲಿ ಬಂದಿದೆ ಅದಾದ ಮೇಲೆ ಡಿಟೇಲ್ ಆದ ವರದಿ ನಿಜವಾಗಿ ಈ ಸದನದಲ್ಲಿ ಬಂದಿದ್ದರೆ ಎಲ್ಲರ ಗಮನಕ್ಕೆ ಬರುತ್ತಿತ್ತು. ಆದರೆ ಬಹುಶಃ ಗವರ್ನರ್ ಆಫೀಸ್ ಮುಟ್ಟುವುದಕ್ಕೆಂತ ಮುಂಚೆ ಆದು ಲೀಕ್ ಔಟ್ ಆಯಿತು. ತಾವು ಏನು ಮಾಡಿದಿರಿ ಎಂದರೆ ನಾವು ನೋಟೀಸ್ ಕೊಟ್ಟಮೇಲೆ ರೀಕನ್ಸಿಡರ್ ಮಾಡುತ್ತೇವೆಂದು ಹೇಳಿದ್ದಿರಿ.